
ನಾಂದಿಪದ

# ಸಾಹಿತ್ಯದ ಜೀವಸೆಲೆಯ ಹುಡುಕಾಟ



‘ಕನ್ನಡದ ಬಹುತ್ವ’ದ ಕುರಿತು ಮಾತನಾಡುವಾಗ, ಕವಿರಾಜಮಾರ್ಗಕಾರನ ‘ಕನ್ನಡಂಗಳ್’ ಎನ್ನುವ ಮಾತನ್ನು ಹಲವು ಸಂದರ್ಭಗಳಲ್ಲಿ ಬಳಸುತ್ತೇವೆ. ಹಾಗಾದರೆ, ಕನ್ನಡದ ಬಹುಮುಖಿ ಸ್ವರೂಪ ಯಾವ ಬಗೆಯದು? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಕನ್ನಡ ನುಡಿ ಭಿನ್ನವಾಗಿರುವುದನ್ನು ಗುರ್ತಿಸುತ್ತೇವೆ. ಆದರೆ, ಭಿನ್ನ ಉಚ್ಚಾರಣೆಗಳ ಮೂಲಕವಷ್ಟೇ ಭಾಷೆಯೊಂದರ ಅನನ್ಯತೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ, ಬಹುತ್ವದ ಸ್ವರೂಪವನ್ನು ನಿರ್ದಿಷ್ಟ ಚೌಕಟ್ಟಿನೊಳಗೆ ನೋಡಿದಂತಾಗುತ್ತದೆ. ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಿಂದ ಶೋಧಿಸಿದಾಗ ಭಾಷೆಯ ನಿಜ ಚೆಲುವು ಕಾಣಿಸುತ್ತದೆ. ಕನ್ನಡದೊಳಗೇ ಇರುವ ವಿಭಿನ್ನ ಸ್ತರಗಳ ಹುಡುಕಾಟದಲ್ಲಿ, ಭೌಗೋಳಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕಾರಣಗಳನ್ನು ಗಮನಿಸಬೇಕು. ಅಂಥ ಹುಡುಕಾಟ, ಕನ್ನಡ ಭಾಷೆ ತನ್ನೊಳಗೆ ಅಂತರ್ಜಲದ ರೂಪದಲ್ಲಿ ಪ್ರಜಾಪ್ರಭುತ್ವ ಗುಣವನ್ನು ರೂಢಿಸಿಕೊಂಡಿರುವುದನ್ನು ಸ್ಪಷ್ಟವಾಗಿ ಕಾಣಿಸುತ್ತದೆ. ಅಂಥದೊಂದು ಹುಡುಕಾಟದ ವಿಶ್ಲೇಷಣೆ, ರಹಮತ್ ತರೀಕೆರೆ ಅವರ ‘ಕನ್ನಡದ ಬಹುರೂಪಿ ಚಹರೆಗಳು’ ಈ ಸಂಚಿಕೆಯ ‘ಮಯೂರ ವಿಶೇಷ’. ನಾಡು–ನುಡಿಯ ಕುರಿತಂತೆ ಯುವ ತಲೆಮಾರಿನ ತಿಳಿವನ್ನು ಈ ಬರಹ ಹೆಚ್ಚಿಸಬಲ್ಲದು ಹಾಗೂ ನಮ್ಮ ‘ಕನ್ನಡ ಹೆಮ್ಮೆ’ಗೆ ಮತ್ತಷ್ಟು ಪುಷ್ಟಿ ನೀಡಬಲ್ಲದು. ಕನ್ನಡದ ಲೇಖಕ ಲಕ್ಷ್ಮೀಶ ತೋಳ್ಪಾಡಿ ಹಾಗೂ ಅರ್ಜೆಂಟೈನಾದ ಲೇಖಕಿ ಲೂಯಿಸಾ ವೆಲೆಂಜುವೆಲಾ ಅವರ ಸಂದರ್ಶನಗಳು ಕೂಡ ಸಮಾಜ–ಸಾಹಿತ್ಯದ ಜೀವಸೆಲೆಯಾದ ಬಹುತ್ವದ ಕುರಿತು ಮಾತನಾಡಿವೆ. ನೀರೆಲ್ಲವೂ ತೀರ್ಥ, ತೀರ್ಥಗಳೆಲ್ಲವೂ ನೀರು ಎನ್ನುವ ಅರಿವನ್ನು ಸಾಹಿತ್ಯದ ಆಶಯವನ್ನಾಗಿ ಲಕ್ಷ್ಮೀಶ ತೋಳ್ಪಾಡಿ ಗುರ್ತಿಸುತ್ತಾರೆ. ಈ ತಿಳಿವಳಿಕೆ ಸಾಹಿತ್ಯದ ಜೀವಪರ ಗುಣಕ್ಕೆ ಅಡಿಗೆರೆ ಎಳೆಯುವಂತಿದೆ.

ಈ ವರ್ಷಾಂತ್ಯ ಸಂಚಿಕೆ ರುಚಿಕರ ಗದ್ಯ–ಪದ್ಯಗಳಿಂದ ಸಮೃದ್ಧವಾಗಿದೆ. ಇಬ್ಬರು ಹೊಸ ಕಥೆಗಾರರನ್ನು ‘ಮಯೂರ’ದ ಈ ಸಂಚಿಕೆ ಕನ್ನಡ ಸಾಹಿತ್ಯಕ್ಕೆ ಪರಿಚಯಿಸುತ್ತಿದೆ. ಕರ್ಕಿ ಕೃಷ್ಣಮೂರ್ತಿ ಅವರ ‘ಇಮೋಜಿ ಭಾಷೆ’ ಅಂಕಣ ಈ ಸಂಚಿಕೆಯೊಂದಿಗೆ ಕೊನೆಗೊಂಡಿದೆ. ಒಂದರ ಕೊನೆ ಎನ್ನುವುದು ಹೊಸತೊಂದರ ಹುಟ್ಟಿನ ಬೀಜವಷ್ಟೇ.

**ಮಯೂರ ಬಳಗ**
editormy@mayura.co.in